ಪಿ.ಡಬ್ಲೂ-3

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 14-02-2020

ಪಾಟಿ ಸವಾಲುಃ ಶ್ರೀ ಪಿ.ಕೆ.ಜಿ ವಕೀಲರಿಂದ

ಪ್ರಾಸಾ 1 ನನ್ನ ಬಾವ , ಪ್ರಾಸಾ 2 ನನ್ನ ಅತ್ತೆ ಮಗ, ನಾನು ಬೆಟ್ಟದಳ್ಳಿ ಗ್ರಾಮ ಪಂಚಾಯಿತಿ ಸದಸ್ಯನಾಗಿಲ್ಲಾ.ದೊಡ್ಡಯ್ಯ ನನ್ನ ದೊಡ್ಡಪ್ಪ. ನನ್ನ ದೊಡ್ಡಪ್ಪ ಪ್ರತಿವಾದಿಗಳ ಮೇಲೆ ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ಓ.ಎಸ್. ನಂ. 161/14 ಮತ್ತು 59/16 ರಂತೆ ದಾವೆಯನ್ನು ಹಾಕಿದ್ದರು ಎಂದರೆ ಸರಿ . ಸದರಿ ದಾವೆ ಪ್ರಸ್ತುತ ಸಹ ನಡೆಯುತ್ತಿದೆ ಎಂದರೆ ಸರಿ .

ಸದರಿ ಎರಡು ದಾವೆಯಲ್ಲಿ ನಾನು ಈ ಕೇಸಿನ ಪ್ರತಿವಾದಿಗಳ ವಿರುದ್ದ ಸಾಕ್ಷಿ ಹೇಳಲು 2 ವಾರದ ಹಿಂದೆ ಬಂದಿದ್ದೆ ಎಂದರೆ ಸರಿ . ನಮ್ಮ ಕುಟುಂಬಕ್ಕೂ ಮತ್ತು ವಾದಿಗಳ ಕುಟುಂಬಕ್ಕೂ ಪ್ರತಿವಾದಿ ಕುಟುಂಬದ ಮೇಲ ಮೊದಲಿನಿಂದ ವೈರತ್ವ ಇದೆ ಎಂದರೆ ಸರಿ . ಆ ರೀತಿ ವೈರತ್ವ ಇರುವ ಕಾರಣಕ್ಕೆ ನಾನು ಮೇಲೆ ತಿಳಿಸಿದ 2 ದಾವೆಯಲ್ಲಿ ಸಾಕ್ಷಿ ಹೇಳಲು ಬಂದಿದ್ದೆ ಎಂದರೆ ಸರಿಯಲ್ಲಾ .

ವಾದಿಗಳು ಒಂದೇ ಮನೆಯಲ್ಲಿ ವಾಸವಿಲ್ಲಾ, ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ. ಊರಿನಲ್ಲಿರುವ ವಾದಿಗಳು ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಹೊರಗಡೆ ಇರುವ ವಾದಿಗಳು ಬೇರೆ ಬೇರೆ ವ್ಯವಸಾಯ ಮಾಡುತ್ತಿದ್ದಾರೆ. ವಾದಿ ಕುಟುಂಬಕ್ಕೆ ಸೇರಿದ ಜಾಗ ಎಷ್ಟಿದೆ ಎಂದು ಗೊತ್ತಿಲ್ಲಾ. ಮತ್ತು ಈ ದಾವೆಯಲ್ಲಿರುವ ಸರ್ವೆ ನಂ. ಹೊರತುಪಡಿಸಿ ಬೇರೆ ಸರ್ವೆ ನಂ. ನನಗೆ ಗೊತ್ತಿಲ್ಲಾ . ದಾವಾ ಸ್ವತ್ತಿನ ಸರ್ವೆ ನಂ. ನಮ್ಮ ತೋಟದ ಪಕ್ಕ ಇರುವುದರಿಂದ ಮಾತ್ರ ತಿಳಿದುಕೊಂಡಿರುತ್ತೇನೆ.

ನಮ್ಮ ತೋಟದ ಪಕ್ಕ ಸರ್ವೆ ನಂ, 79/20, 79/21, 79/22, 57/4 ಇರುತ್ತದೆ. ಸದರಿ ಸರ್ವೆ ನಂ. ಗಳ ಪೈಕಿ 3 ಸರ್ವೆ ನಂ. ಗಳನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ. ಸದರಿ 3 ಸರ್ವೆ ನಂ. ಗಳ ಪೈಕಿ 1 ಎಕರೆ ತೋಟ , ಅಂದಾಜು 30 ರಷ್ಟು ಗದ್ದೇ ಪ್ರದೇಶ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ.

ಒತ್ತುವರಿ ಆದ ಬಗ್ಗೆ ನಾನು ನನ್ನ ಪ್ರಮಾಣ ಪತ್ರದಲ್ಲಿ ನಾನು ಅಂದಾಜಿನಲ್ಲಿ ಹೇಳಿರುತ್ತೇನೆ. ವಾದಿಗಳು ಈ ದಾವೆಯನ್ನು ಅಂದಾಜು ಒತ್ತುವರಿ ಮೇಲ ಹಾಕಿರುತ್ತಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸರ್ವೆ ಕಲ್ಲನ್ನು ಕಿತ್ತು ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡು ಬರುತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ದಾವಾ ಜಾಗದಲ್ಲಿ ಸರ್ವೆ ಕಲ್ಲು ಇಲ್ಲ ಎಂದರೆ ಸರಿಯಲ್ಲಾ .

ಸದರಿ ಕಲ್ಲನ್ನು ನಾನು ನೋಡಿದ್ದು ಆದರೆ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲಾ. ಒತ್ತುವರಿ ಮಾಡಿ ಅಂದಾಜು 10 ವರ್ಷ ಕಳೆದಿರಬಹುದು. ನನ್ನ ಪ್ರಮಾಣ ಪತ್ರದಲ್ಲಿ 3 ವರ್ಷ ಎಂದು ಹೇಳಿರುವುದು ಸುಳ್ಳು ಎಂದರೆ ಸರಿ. 7 ನೇ ಪ್ರತಿವಾದಿ ಯಾವುದೇ ಒತ್ತುವರಿ ಮಾಡಿಲ್ಲಾ ಎಂದರೆ ಸರಿಯಲ್ಲಾ .

ಸದರಿ ಒತ್ತುವರಿಯನ್ನು ಪ್ರತಿವಾದಿ ಮಾಡಿದ್ದ ಬಗ್ಗೆ ವಾದಿ ಪೋಲಿಸ್ ಅಥವಾ ರೆವಿನ್ಯೂ ಅಧಿಕಾರಿಗೆ ದೂರು ಕೊಟ್ಟ ವಿಚಾರ ನನಗೆ ಗೊತ್ತಿಲ್ಲಾ. ನನಗೆ ಪ್ರತಿವಾದಿಗಳ ವೈರತ್ವ ಇರುವ ಕಾರಣ ಪ್ರತಿವಾದಿ ವಿರುದ್ದವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ . ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲಾ ಎಂದರೆ ಸರಿ. ಪ್ರತಿವಾದಿಗಳು ಯಾವುದೇ ಜಾಗವನ್ನು ಒತ್ತುವರಿ ಮಾಡದೇ ಇರುವ ಕಾರಣ ಯಾವುದೇ ಜಾಗವನ್ನು ವಾದಿಗೆ ಬಿಟ್ಟುಕೊಡಬೇಕಾಗಿಲ್ಲಾ ಎಂದರೆ ಸರಿಯಲ್ಲಾ .

ಪಾಟಿ ಸವಾಲು ಮುಕ್ತಾಯವಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ